ದಿನಾಂಕ : 19-02-2022 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು
-----------------------------------------------------------

ಪಾಟೀ ಸವಾಲು ಶ್ರೀ.ಕೆ.ಸಿ.ಎಸ್. ವಕೀಲರಿಂದ:-

ನಾನು ಲಿಂಗಸಗೂರಿನ ಸರ್ವೇ ಕಚೇರಿಯಲ್ಲಿ ಜವಾನನಾಗಿ ಮೊದಲು ಕಾರ್ಯ ನಿರ್ವಹಿಸುತ್ತಿದೆ ಎಂದರೆ ಸರಿ. ಶಾಮಸುಂದರನ ತಂದೆ ರಾಮದಾಸಪ್ಪ ಅವರು 3 ಜನ ಅಣ್ಣ ತಮ್ಮಂದಿರು ಅವರುಗಳೆಂದರ ಗೊಸಲೆಪ್ಪ, ರಾಮದಾಸಪ್ಪ ಮತ್ತು ಲಕ್ಷ್ಮಿದಾಸಪ್ಪ. ನನ್ನ ತಂದೆಯ ಹೆಸರು ಲಕ್ಷ್ಮಣದಾಸ. ಶಾಮಸುಂದರ ನನ್ನ ಚಿಕ್ಕಪ್ಪನ ಮಗ. ಆ ಬಗ್ಗೆ ತೋರಿಸಲು ನಾನು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಶ್ಯಾಮಸುಂದರಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಲಕ್ಷ್ಮಣ ದಾಸ ಮತ್ತು ಲಕ್ಷ್ಮಣ ದಾಸಪ್ಪ ಇಬ್ಬರು ಬೇರೆ ಬೇರೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಲಕ್ಷ್ಮಣ ದಾಸಪ್ಪನಿಗೇ ಹೊಲುತ್ತದೆ ಅಂತಾ ಸಂಬಂಧಿ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಶ್ಯಾಮಸುಂದರ ತಂದೆ ರಾಮದಾಸ ಹಾಗೂ ಅವನ ಸಹೋದರರು ಆಸ್ತಿಗಳನ್ನು ಹಂಚಿಕೊಂಡಿರುತ್ತಾರೆ ಎಂದರೆ ಸರಿ. ರಾಮದಾಸಪ್ಪ ತೀರಿಕೊಂಡ ನಂತರ ಅವನ ಮಗ ಶ್ಯಾಮಸುಂದರ ತನ್ನ ತಂದೆಗೆ ಬಂದ ಆಸ್ತಿಗಳನ್ನು ಅವನ ಹೆಸರಿನಲ್ಲಿ ಮಾಡಿಕೊಂಡಿರುತ್ತಾನೆ ಎಂದರೆ ಸರಿ. ಶ್ಯಾಮಸುಂದರ ಅವನ ಜೀವಿತ ಕಾಲವಧಿಯಲ್ಲಿ ಆ ಆಸ್ತಿಗಳನ್ನು ಅವನೇ ಬಿತ್ತುವುದು ಬೆಳೆಯುವುದು ಮಾಡುತ್ತಿದ್ದನು ಎಂದರೆ ನಾವು ಬಿತ್ತು ಬೆಳೆಯನ್ನು ನೀಡುತ್ತಿದ್ದೆವು ಎನ್ನುತ್ತಾರೆ. ನಾನು ನೌಕರಿ ಮಾಡುತ್ತಿದ್ದೆ ಒಕ್ಕಲುತನ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿಯು ನನ್ನ ಸಹೋದರ ಮಾಡುತ್ತಿದ್ದ ಎನ್ನುತ್ತಾರೆ.

3. ಶ್ಯಾಮಸುಂದರರವರ 5 ನೇ ಪ್ರತಿವಾದಿಗೆ ಮದುವೆ ಆಗಿದ್ದರು ಎಂದರೆ ಸಂಬಂಧವಿಲ್ಲ. ವಾದಿಯರು ಸದರಿ 5 ನೇ ಪ್ರತಿವಾದಿಗೂ ಶ್ಯಾಮಸುಂದರ ಮಕ್ಕಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಶ್ಯಾಮಸುಂದರಗೆ ರಮೇಶ ಒಬ್ಬನೇ ಮಗ ಎನ್ನುತ್ತಾರೆ. ಆ ಬಗ್ಗೆ ತೋರಿಸಲು ನಾವು ವಂಶಾವಳಿಯನ್ನು ನೀಡಿರುತ್ತೇವೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಸಾಕ್ಷಿಗೆ ನಿಡಿ-3 ನ್ನು ತೋರಿಸಲಾಗಿ ಅದರಲ್ಲಿ ದಾವಾ ಆಸ್ತಿ ಇರುತ್ತದೆ ಎಂದರೆ ಸರಿ ಎನ್ನುತ್ತಾರೆ. ಅದು ಮತ್ತು ಸಾಕ್ಷಿಗೆ ವಾದ ಪತ್ರದಲ್ಲಿ ತೋರಿಸಲಾದಂತಹ ಶೆಡ್ಯೂಲ್ ಒಂದೇ ಇರುತ್ತದೆ ಎಂದರೆ ಸರಿ ಎನ್ನುತ್ತಾರೆ. 6 ನೆ ಪ್ರತಿವಾಯ ಮೂಲತಃ ಸಿಂಧನೂರಿನವರು ಎಂದರೆ ಸಾಕ್ಷಿಯು ಮದುವೆಯಾಗಿ ಸಿಂಧನೂರಿಗೆ ನೀಡಿರುತ್ತೇವೆ. ಅವಳು ನನ್ನಸಹೊದರಿಯಲ್ಲ ದಾವಾ ಆಸ್ತಿಗೂ ಸಂಬಂಧವಿರುವುದಿಲ್ಲ ದಾವೆಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಹೇಳತ್ತಿದ್ದೇನೆ ಎಂದರೆ ಸರಿಯಲ್ಲ. ಎಸಿ ಮತ್ತು ಡಿಸಿ ಯವರ ಬಳಿ ಆರ್.ಟಿ. ಪ್ರಕರಣಗಳು ನಡೆದಿರುತ್ತವೆ ಎಂದರೆ ಸರಿ. ಅದರಲಿಲ ನಾನು ಭಾಗವಹಿಸಿದ್ದ ಎಂದರೆ ಸಾಕ್ಷಿಯು ನನ್ನ ಮತ್ತು ನನ್ನ ಸಹೋದರಿಯ ನುಡುವೆ ಜಗಳವಾದಾಗ ನಾನು ಶಂಕರಗೌಡ ಎನ್ನುವ ವಕೀಲರನ್ನು ನೇಮಿಸಿಕೊಂಡಿದ್ದೆ.

5. 2 ನೇ ವಾದಿಯು ತಹಶೀಲ್ದಾರ ಕಚೇರಿಯಲ್ಲಿ ದಾವಾ ಆಸ್ತಿಯನ್ನು ತನ್ನ ಹೆಸರಿಗೆ ಮಾಡಿಸಿಕೊಳ್ಳುವದಕ್ಕೆ ಮುಟ್ಯೆಷನ್ ಅರ್ಜಯನ್ನು ಸಲ್ಲಿಸಿದ್ದು ನಾವು ಅದಕ್ಕೆ ತಕರಾರನ್ನು ಸಲ್ಲಿಸಿದ್ದೆವು ಎಂದರೆ ನನಗೆ ಗೊತ್ತಿಲ್ಲ. ಆಗ ಆಸ್ತಿಯು 2 ನೇ ವಾದಿ ಹೆಸರಿಗೆ ಮಾಡಿದ್ದು ಅದನ್ನು ಪ್ರಶ್ನಿಸಿ ನಾನು ಮತ್ತು ರಮೇಶನು ಸೇರಿಕೊಂಡು ರಾಯಚೂರು ಡಿಸಿಯವರ ಬಳಿ ಮೇಲ್ಮನವಿ ಸಲ್ಲಿಸಿದ್ದೆವು ಎಂದರೆ ಸಾಕ್ಷಿಯ ರಮೇಶನೆ ಸಲ್ಲಿಸಿದ್ದ ಎನ್ನುತ್ತಾರೆ. ಅರದಲ್ಲಿ 6 ನೇ ಪ್ರತಿವಾದಿಯು ತಾನು ವಾರಸುದಾರಳು ಅಂತಾ ತಾನು ಹಾಜರಾಗಿರುತ್ತಾಳೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ದಾವಾ ಆಸ್ತಿಗೆ ಹತಿಕೊಂಡು ನನ್ನ ಸಹೋದರರ ಜಮೀನು ಇರುತ್ತದೆ. ಇಕ್ಬಾಲ್ ಎನ್ನುವ ಬೆಂಗಳೂರಿನ ವ್ಯಕ್ತಿಗೆ ಕ್ವಾರಿ ನಡೆಸಲು ಲೀಜಿಗೆ ನಡೆಸಲು ನೀಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಮತ್ತು ನನ್ನ ಸಹೋದರರು ನೀಡಿರುತ್ತೇವೆ ಎನ್ನುತ್ತಾರೆ. ನಮ್ಮ ಹೊಲದಲ್ಲಿ ಅಲ್ಲದೇ ಶ್ಯಾಮಸುಂದರರವರ ಹೊಲವನ್ನು ಅಕ್ರಮವಾಗಿ ಪ್ರವೇಶಿಸಿ ಕ್ವಾರಿ ನಡೆಸುತ್ತಿದ್ದೇವೆ ಎಂದರೆ ಸರಿಯಲ್ಲ ಹಾಗಾಗಿ 2 ನೇ ವಾದಿ ಈ ದಾವೆಯನ್ನು ನಮ್ಮ ವಿರುದ್ದ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-8 ನ್ನು ತೊರಿಸಲಾಗಿ ಅದರಲ್ಲಿ 2 ನೇ ಪ್ರತಿವಾಯ ತಂದೆ ಶ್ಯಾಮಸುಂದರ ಅಂತಾ ತೋರಿಸಲಾಗಿರುತ್ತದೆ ಎಂದರೆ ಸಾಕ್ಷಿಯ ಸದರಿ ದಾಖಲಾತಿಯನ್ನು ನಿರಾಕರಿಸುತ್ತಾರೆ. ಸಾಕ್ಷಿಗೆ ವಾದಿಗೆ

ಸಂಬಂಧಸಿದಿ ಮಾರ್ಕ ಕಾರ್ಡ ಹಾಗೂ ಇತರೇ ದಾಖಾಲಾತಿಗಳನ್ನು ತೋರಿಸಲಾಗಿ ಸಾಕ್ಷಿಯು ನಿರಾಕರಿಸುತ್ತಾ ವಾದಿಯರ ಜಾತಿಯೇ ಬೆರೆ ನಮ್ಮ ಜಾತಿಯೇ ಬೇರೆ ಅವರಿಗೆ ನಾವು ಸಂಬಂಧಪಟ್ಟಿರುವುದಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗಾಗಿ ಎಲ್ಲ ವಿಷಯಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ಸಾಕ್ಷಿಗೆ ನಿಡಿ-3 ನ್ನು ತೋರಿಸಲಾಗಿ ಅದರಲ್ಲಿ ಶ್ಯಾಮಸುಂದರನದು 5 ನೇ ಹಿಸ್ಸಾ ಎನ್ನುತ್ತಾರೆ, 4 ನೇ ಹಿಸ್ಸಾ ತನ್ನ ಸಹೋದರರದು ಹಾಗೂ 6 ನೇ ಹಿಸ್ಸಾ ನನ್ನ ಹಾಗೂ ನನ್ನ ಸಹೋದರನ ಹೆಸರಿನಲ್ಲಿರುತ್ತದೆ. ಹಿಸ್ಸಾ 5 ರಲ್ಲಿ ನಮಗೆ ಯಾವುದೇ ಹಕ್ಕಿಲ್ಲ ಇರುವುದಿಲ್ಲ ಎಂದರೆ ಸರಿ. ದಾವಾ ಹೂಡಿದಾಗಲೇ 6 ನೇ ಪ್ರತಿವಾದಿಗೆ ಹಕುರದು ನಮ್ಮ ಗಮನಕ್ಕೆ ಬಂದಿರುತ್ತದೆ. ಆಗಲೇ ಅವಳನ್ನು ಕರೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂದರೆ ಅವಳು ಆಗಲೇ ಬಂದಿರುತ್ತಾಳೆ ಎನ್ನುತ್ತಾರೆ. ನಾವು ಈ ದಾವೆಗೆ ದಾಖಲಾತಿಗನಳ್ನು ಹಾಕಿ ಸಾಕ್ಷಿಯ ನೀಡಿದ ನಂತರ 6 ನೇ ಪ್ರತಿವಾದಿಯನ್ನು ಕರೆದುಕೊಂಡ ಬಂದಿರುತ್ತೆವೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯನ್ನು ನಾವೇ ಸೃಷ್ಟಿಸಿ ಶ್ಯಾಮಸುಂದರನ ಸಹೋದರರಿಯಂತೆ ಪ್ರತಿಪಾದಿಸಲು ಎಲ್ಲವನ್ನು ಸೃಷ್ಟಿಸಿರುತ್ತೇವೆ ಎಂದರೇ ಸರಿಯಲ್ಲ. ನಮಗೂ ಮತ್ತು 6 ನೇ ಪ್ರತಿವದಿಗೆ ಮೃತ ಶ್ಯಾಮಸುಂದರಗೆ ಯಾವುದೇ ಸಂಬಂಧವಿದಿದ್ದರೂ ಸಹ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ.ಕೇ. ಸರಿ ಇದೆ
**ಸಹಿ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು.,ಲಿಂಗಸುಗೂರು